# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/129/2015-16 ದಿನಾಂಕ:11.08.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಮೇಟಿ ಸಿದ್ದಪ್ಪ ತಂದೆ ಲೇಟ್ ಹೆಗ್ಗಪ್ಪ<br>ಗ್ರಾಮ:-ಕನ್ನಿಹಳ್ಳಿ ತಾ:-ಹೆಚ್.ಬಿ.ಹಳ್ಳಿ<br>[ಯು.ಕೊಟ್ರೇಶ, ವಕೀಲರು ಹ.ಬೊ.ಹಳ್ಳಿ] | 1.ಬಸಮ್ಮ ಗಂಡ ಚನ್ನಬಸಪ್ಪ<br>2.ವನಜಾಕ್ಷಿ<br>3.ಆರ್.ನಾಗರತ್ನ<br>4.ಮಂಜುಳ<br>ಗ್ರಾಮ:-ಇಟ್ಟಿಗಿ ತಾ:-ಹಡಗಲಿ |

ವಿವಾದಿತ ಜಮೀನಿನ ವಿವರ:

| ಕ್ರ.ಸಂ. | ತಾಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಕನ್ನಿಹಳ್ಳಿ | 168 | 1-00 | ಖುಷ್ಕಿ |

ಪೀಠಿಕೆ:-

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಕನ್ನಿಹಳ್ಳಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಕನ್ನಿಹಳ್ಳಿ ಗ್ರಾಮದ ನಿವಾಸಿಯಾದ ಮೇಟಿ ಸಿದ್ದಪ್ಪ ತಂದೆ ಲೇಟ್ ಹೆಗ್ಗಪ್ಪ ಇವರು ಬಳ್ಳಾರಿ ಜಿಲ್ಲೆ ಹಡಗಲಿ ತಾಲೂಕಿನ ಇಟ್ಟಗಿ ಗ್ರಾಮದ ಹೆಚ್.ಸುರೇಶ ತಂದೆ ಚನ್ನಬಸಪ್ಪ ಇವರಿಂದ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-00338-2016-2017 ದಿನಾಂಕ:04.05.2016 ರಂದು ಮೊತ್ತ ರೂ:65,000/-ಕ್ಕೆ ಖರೀದಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21ರ ನೋಟೀಸನ್ನು ದಿನಾಂಕ:05.05.2016 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:01.06.2016 ರಂದು ಬಸಮ್ಮ ಗಂಡ ಚನ್ನಬಸಪ್ಪ, ವನಜಾಕ್ಷಿ, ಆರ್.ನಾಗರತ್ನ, ಮಂಜುಳ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.39/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:23.06.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:23.06.2016 ರಿಂದ 28.07.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಉಭಯರು ಹಾಜರಾಗಿರುತ್ತಾರೆ. ಅರ್ಜಿದಾರರು ಹಾಜರಾಗಿ ಹೇಳುವಂತೆ; ಸದರಿ ಜಮೀನು ಕ್ರಯ ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ತಕರಾರುದಾರರು ಹಾಜರಾಗಿ ಹೇಳುವಂತೆ; ಸದರಿ ಜಮೀನಿನಲ್ಲಿ ನಮಗೂ ಪಾಲು ಇರುತ್ತದೆ ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ದಿನಾಂಕ:28.07.2016 ರಂದು ಅರ್ಜಿದಾರರ ಪರವಾಗಿ ಯು.ಕೊಟ್ರೇಶ, ವಕೀಲರು ಹ.ಬೊ.ಹಳ್ಳಿ ಇವರು ತಮ್ಮ ವಕಾಲತ್ತು ಅರ್ಜಿಯನ್ನು ಸಲ್ಲಿಸಿ ಹೇಳುವಂತೆ; ಸದರಿ ಜಮೀನು ನೋಂದಾಯಿತ ಕ್ರಯ ಪ್ರಕಾರ ಅರ್ಜಿದಾರರ ಹೆಸರಿಗೆ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರನ್ವಯ ಹಕ್ಕು ಬದಲಾವಣೆಯನ್ನು ಮಾಡಲು ಹೇಳಿಕೆಯನ್ನು ಮತ್ತು ವಾದಿಯ ಪರವಾಗಿ ಸಲ್ಲಿಸಲಾದ ಲಿಖಿತ ವಾದ ಪತ್ರವನ್ನು ಈ ಕೆಳಗಿನಂತೆ ಸಲ್ಲಿಸಿರುತ್ತಾರೆ.

1) ಬಳ್ಳಾರಿ ಜಿಲ್ಲಾ ಹ.ಬೊ.ಹಳ್ಳಿ ತಾಲೂಕು, ಕೋಗಳಿ ಹೋಬಳಿ, ಕನ್ನಿಹಳ್ಳಿ ಗ್ರಾಮಕ್ಕೆ ಸೇರಿದ ಸ.ನಂ.168 ವಿಸ್ತೀರ್ಣ 8-96 ಎಕರೆ ಪೈಕಿ (ವಿ)1-00 ಎಕರೆ ಜಮೀನು ವಿವಾದಾಸ್ಪದ ಜಮೀನು ಮಾನ್ಯ ನ್ಯಾಯಾಲಯವು ಪರಿಗಣಿಸಿದ್ದು, ಇರುತ್ತದೆ. ಸದರಿ ಮೇಲ್ಕಾಣಿಸಿದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ ವಾದಿಯು ನೋಂದಾಯಿತ ಖರೀದಿ ಪತ್ರದ ಆಧಾರದ ಮೇಲೆ ಹಕ್ಕು ಬದಲಾವಣೆಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.
2) ವಾದಿಯು ದಿನಾಂಕ:04.05.2016 ರಲ್ಲಿ ನೋಂದಾಯಿತ ಖರೀದಿ ಪತ್ರದ ಮೂಲಕ ಈ ಮೇಲ್ಕಂಡ ಆಸ್ತಿಯನ್ನು ಅದರ ಕಾನೂನು ಬದ್ಧ ಮಾಲಿಕರಾದ ಹೆಚ್.ಸುರೇಶ ತಂದೆ ಚನ್ನಬಸಪ್ಪ ಇವರಿಂದ ರೂ:65,000/-ಕ್ಕೆ ಖರೀದಿಯನ್ನು ಮಾಡಿರುತ್ತಾರೆ. ಮತ್ತು ಖರೀದಿ ಮಾಡಿದ ದಿನದಿಂದಲೇ ಸ್ವಾಧೀನ ಅನುಭವವನ್ನು ಹೊಂದಿರುತ್ತಾರೆ. ವಾದಿಯು ಸದರಿ ವಿವಾದಿತ ಆಸ್ತಿಯನ್ನು ಕೊಳ್ಳುವ ಪೂರ್ವದಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದ ನಂತರ ಮಾರಾಟಗಾರರಾದ ಹೆಚ್.ಸುರೇಶ ತಂದೆ ಚನ್ನಬಸಪ್ಪ ಇವರ ಹಕ್ಕು ಮತ್ತು ಸ್ವಾಧೀನತೆಯನ್ನು ಪಹಣಿ ದಾಖಲೆ ಹಕ್ಕುಬದಲಾವಣೆ ಪರಿಶೀಲಿಸಿ ಖಚಿತ ಪಡಿಸಿಕೊಂಡನಂತರ ಸದರಿ ಆಸ್ತಿಯನ್ನು ಕಾನೂನು ಬದ್ಧವಾಗಿ ಕರ್ನಾಟಕ ನೊಂದಣಿ ಅಧಿನಿಯಮದಡಿಯಲ್ಲಿ ಖರೀದಿಮಾಡಿರುತ್ತಾರೆ.
3) ಸದರಿ ಮೇಲ್ಕಾಣಿಸಿದ ಖರೀದಿ ಪತ್ರದ ಆಧಾರದ ಮೇಲೆ ವಾದಿಯು ತನ್ನ ಹೆಸರಿನ ಮೇಲೆ ಹಕ್ಕು ಬದಲಾವಣೆಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದರೆ ಪ್ರತಿವಾದಿಯು ಸದರಿ ವಿವಾದಿತ ಆಸ್ತಿಯ ಮೇಲೆ ಯಾವುದೇ ಹಕ್ಕು ಅಧಿಕಾರ ಇಲ್ಲದಿದ್ದರು ಸಹಾ, ಸುಳ್ಳು ತಕರಾರನ್ನು ಸಲ್ಲಿಸಿರುತ್ತಾರೆ. ಅದ್ದರಿಂದ ಪ್ರತಿವಾದಿಗಳ ತಕರಾರನ್ನು ಕಾನೂನಿನ ಯಾವುದೇ ಮಾನ್ಯತೆ ಇರುವುದಿಲ್ಲ.
4) ಆದುದರಿಂದ ಈ ಮೇಲೆ ವಿವರಿಸಿದ ಕಾರಣಗಳಿಗಾಗಿ ವಾದಿಯು ಕಾನೂನು ಬದ್ಧ ಖರೀದಿದಾರರಾಗಿರುವುದರಿಂದ ಕರ್ನಾಟಕ ಭೂಕಂದಾಯ ಅಧಿನಿಯಮದಡಿಯಲ್ಲಿ ವಾದಿಯ ಹೆಸರಿನಲ್ಲಿ ಹಕ್ಕು ಬದಲಾವಣೆಯನ್ನು ಮಾಡಬೇಕಾಗಿ ಲಿಖಿತವಾಗಿ ವಿನಂತಿಸಿರುತ್ತಾರೆ. ಹಾಗೂ ಸದರಿ ಜಮೀನಿಗೆ ಸಂಬಂಧಿಸಿದಂತೆ 1978-79 ರಿಂದ 2000-01 ರವರೆಗೆ ಕೈಬರಹ ಪಹಣಿ ಪತ್ರಿಕೆಗಳು ಮತ್ತು ಡೈಯಗ್ಲಾಟ್ ಹಾಜರು ಪಡಿಸಿರುತ್ತಾರೆ.

ಪ್ರಕರಣದಲ್ಲಿ ಸದರಿ ಜಮೀನಿಗೆ ಸಂಬಂಧಿಸಿದ ಪಟ್ಟಾದಾರರು/ವಿಕ್ರಯದಾರರು ದಿನಾಂಕ:28.07.2016 ರಂದು ಹಾಜರಾಗಿ ಹೇಳುವಂತೆ; ಸದರಿ ಜಮೀನು ನನ್ನ ಹೆಸರಿಗೆ ಪಟ್ಟಾ/ಪಹಣಿ ಇರುತ್ತದೆ. ನನ್ನ ಆರೋಗ್ಯ ಸರಿ ಇಲ್ಲದ ಕಾರಣ, ಕ್ರಯಕ್ಕೆ ಮಾರಾಟ ಮಾಡಿರುತ್ತೇನೆ. ಅರ್ಜಿದಾರರ/ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ನನ್ನ ಯಾವುದೇ ತಂಟೆ, ತಕರಾರು ಇರುವುದಿಲ್ಲ ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು/ಪರ ವಕೀಲರು, ಪಟ್ಟಾದಾರರು/ವಿಕ್ರಯದಾರರು ಮತ್ತು ತಕರಾರುದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆಮಾಡಲಾಗಿ, ಕ್ರಯದಾರರಾದ ದಾಸಪ್ನರ ದಾಸಪ್ಪ ತಂದೆ ಲೇಟ್ ಬಾಳಪ್ಪ ಇವರು ಹೆಚ್.ಸುರೇಶ ತಂದೆ ಚನ್ನಬಸಪ್ಪ ಇವರಿಂದ ನೋದಾಯಿತ ಕ್ರಯ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-00338-2016-2017 ದಿನಾಂಕ:04.05.2016 ರಂದು ಮೊತ್ತ ರೂ:65,000/-ಕ್ಕೆ ಖರೀದಿಸಿರುವುದು ಕಂಡುಬಂದಿರುತ್ತದೆ. ಹಾಗೂ ಸದರಿ ಜಮೀನಿಗೆ ಸಂಬಂಧಿಸಿದ 1978-79 ರಿಂದ 2000-01 ರವರೆಗೆ ಕೈಬರಹ ಪಹಣಿ ಪತ್ರಿಕೆಗಳು ಮತ್ತು ಡೈಯಗ್ಲಾಟ್ ಪರಿಶೀಲಿಸಲಾಗಿ, ಡೈಯಗ್ಲಾಟ್ ಪ್ರತಿಯಲ್ಲಿ ಜಿ.ಡಿ.ಎಂದು ನಮೂದಿದ್ದು, ಸದರಿ ಕಾಲಂ ನಂ.11ರಲ್ಲಿ ಮೂಲ ಪಟ್ಟಾದಾರರ ಹೆಸರು ಕುರುಬರ ದೊಡ್ಡ ಮೂಗಪ್ಪ ಎಂದು ನಮೂದಾಗಿರುತ್ತದೆ. ಆದ ಕಾರಣ, ಕ್ರಯ ಪ್ರಕಾರ ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## –:ಆದೇಶ:–

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129 ರನ್ವಯ ಮತ್ತು ಎಂ.ಆರ್.ನಂ.39/2015–16 ರ ಪ್ರಕಾರ, ಕನ್ನಿಹಳ್ಳಿ ಗ್ರಾಮದ ಸ.ನಂ. 168 ವಿಸ್ತೀರ್ಣ 1–00 ಎಕರೆ ಜಮೀನು ಕ್ರಯದಾರರಾದ ಮೇಟಿ ಸಿದ್ದಪ್ಪ ತಂದೆ ಲೇಟ್ ಹೆಗ್ಗಪ್ಪ ಇವರ ಹೆಸರಿಗೆ ಕ್ರಯ ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:11.08.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

11/8/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,ಕೋಗಳಿ

ಉಪ ತಹಶೀಲ್ದಾರರು,
ನಾಡ ಕಛೇರಿ, ಕೋಗಳಿ

ಪ್ರತಿಯನ್ನು:–

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಶುದ್ಧಪ್ರತಿ ಕಡತಕ್ಕೆ.